# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕುಶಲ ಅಥವಾ ಕುಶಲಿಯಲ್ಲದ ಬಡ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ವ್ಯಕ್ತಿಗಳಿಗೆ ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಕಿರು ಸಾಲ ಯೋಜನೆ ಜಾರಿಗೆ ತರುವ ಬಗ್ಗೆ.

ಓದಲಾಗಿದೆ:- 1)ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರ 2007-08ರ ಆಯವ್ಯಯ ಭಾಷಣ.
2)ಸಚಿವ ಸಂಪುಟದ ದಿ:9-2-2007ರ ನಿರ್ಣಯ.

**ಪ್ರಸ್ತಾವನೆ:-**

ಕರ್ನಾಟಕ ಸರ್ಕಾರದ 2007-08 ನೇ ಸಾಲಿನ ಆಯವ್ಯಯದಲ್ಲಿ ದುರ್ಬಲ ವರ್ಗಗಳ ಆರ್ಥಿಕ ಸುಧಾರಣೆಗಾಗಿ ಕಿರು ಸಾಲ ಯೋಜನೆ (Micro Credit) ಎನ್ನುವ ನೂತನ ಯೋಜನೆಯನ್ನು ಘೋಷಿಸಿರುತ್ತದೆ. ಈ ಯೋಜನೆಯಡಿ ಗ್ರಾಮೀಣ, ಅರೆ ನಗರ ಮತ್ತು ನಗರ ಪ್ರದೇಶಗಳಿಗೆ ಸೇರಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಕುಶಲಿ ಅಥವಾ ಕೌಶಲಿಯಲ್ಲದ ವ್ಯಕ್ತಿಗಳಿಗೆ ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಧನ ಸಹಾಯ ನೀಡಲಾಗುವುದು ಎಂದು ಘೋಷಿಸಲಾಗಿದೆ ಹಾಗೂ ಈ ಉದ್ದೇಶಕ್ಕಾಗಿ 10 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಲಾಗಿದೆ.

ಮೇಲೆ 2) ರಲ್ಲಿ ಓದಲಾದ ನಿರ್ಣಯದನ್ವಯ ರಾಜ್ಯ ಸಚಿವ ಸಂಪುಟ ದಿ:9-2-2007 ರಂದು ಸ್ವಯಂ ಉದ್ಯೋಗದಡಿ ಸಣ್ಣ ಪ್ರಮಾಣದ ಆರ್ಥಿಕ ಸಾಲದ ಯೋಜನೆಗೆ (Micro Credit) ತಾತ್ವಿಕವಾಗಿ ತನ್ನ ಅನುಮೋದನೆ ನೀಡಿರುತ್ತದೆ. ಸದರಿ ಯೋಜನೆಯಡಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿನ ಫಲಾನುಭವಿಗಳಿಗೆ ಕಿರು ಸಾಲವನ್ನು ಮಂಜೂರು ಮಾಡಲು ಅವಕಾಶವಿರುತ್ತದೆ. i)ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ii) ಕರ್ನಾಟಕ ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮ ನಿಯಮಿತ iii) ಡಾ: ಡಿ.ದೇವರಾಜ್ ಅರಸ್ ಅಭಿವೃದ್ಧಿ ನಿಗಮ ನಿಯಮಿತ iV) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಈ ನಾಲ್ಕು ಸಂಸ್ಥೆಗಳ ಮುಖಾಂತರ ಆಯವ್ಯಯದಲ್ಲಿ ಒದಗಿಸಲಾದ ಅನುದಾನ ಲಭ್ಯತೆ ಮೇರೆಗೆ ಈ ಯೋಜನೆಯನ್ನು 2007-08ನೇ ವರ್ಷದಲ್ಲಿ ಜಾರಿಗೆ ತರಲಾಗುವುದು.

ಆದ್ದರಿಂದ ಈ ಆದೇಶ.

**ಸರ್ಕಾರಿ ಆದೇಶ ಸಂ: ಸಕಇ 90 ಎಸ್‌ಡಿಸಿ 2006, ಬೆಂಗಳೂರು ದಿ:14-5-2007**

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭಗಳ ಹಿನ್ನೆಲೆಯಲ್ಲಿ ಗ್ರಾಮೀಣ, ಅರೆ ನಗರ ಮತ್ತು ನಗರ ಪ್ರದೇಶಗಳಿಗೆ ಸೇರಿದ ಬಡ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಕುಶಲಿ ಅಥವಾ ಕುಶಲಿಯಲ್ಲದ ವ್ಯಕ್ತಿಗಳ ಅಭಿವೃದ್ಧಿಗಾಗಿ ಅವರು ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು 2007-08ನೇ ಸಾಲಿನಿಂದ ಕಿರು ಸಾಲ (Micro Credit) ಯೋಜನೆಯನ್ನು ಈ ಕೆಳಕಂಡ ನಿಗಮಗಳ ಮುಖಾಂತರ ಆಯವ್ಯಯದಲ್ಲಿ ಒದಗಿಸಲಾದ ಅನುದಾನ ಲಭ್ಯತೆ ಮೇರೆಗೆ ಅನುಷ್ಠಾನಗೊಳಿಸಲು ಸರ್ಕಾರವು ಆದೇಶಿಸಿದೆ.

1) ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ
2) ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ
3) ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
4) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ

ಕಿರು ಸಾಲ ಯೋಜನೆಯನ್ನು ಈ ಕೆಳಕಂಡಂತೆ ಕಾರ್ಯಗತಗೊಳಿಸಲು ಆದೇಶಿಸಿದೆ.

i) ನಿಗಮವು ಫಲಾಪೇಕ್ಷಿಗಳ ಸ್ವ-ಸಹಾಯ ಗುಂಪುಗಳನ್ನು ಇತರ ಇಲಾಖೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಮೂಲಕ ಸಂಘಟನೆ ಮಾಡಿ ಸ್ವ-ಸಹಾಯ ಗುಂಪುಗಳ ಮೂಲಕ ಒಂದು ಯೋಜನೆಯನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸಬಹುದಾಗಿದೆ. ಸ್ವ-ಸಹಾಯ ಗುಂಪಿನ ಸದಸ್ಯರಾಗಿರುವ ಫಲಾನುಭವಿ ಜಮೀನು ಹೊಂದಿದ್ದಲ್ಲಿ ಅಥವಾ ಸರ್ಕಾರಿ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿದ್ದಲ್ಲಿ ಅವರಿಗೆ ಸಣ್ಣ ಪ್ರಮಾಣದ ಆರ್ಥಿಕ ಸಾಲ ಯೋಜನೆಯಡಿಯಲ್ಲಿ ಸಾಲ ಮಂಜೂರು ಮಾಡತಕ್ಕದ್ದಲ್ಲ. ಮೈಕ್ರೋ ಕ್ರೆಡಿಟ್ ಹಣಕಾಸು ಯೋಜನೆಯಡಿ ಮತ್ತು ಸ್ವಯಂ ಉದ್ಯೋಗ ಯೋಜನೆಯಡಿ **ಶೇ.50 ರಷ್ಟು ಸಹಾಯಧನ, ಗರಿಷ್ಟ ರೂ.2,500-00 ಗಳು ಪ್ರತಿ ಫಲಾನುಭವಿಗೆ** ಫಲಾನುಭವಿಯ ಹೆಸರಿನಲ್ಲಿ ಮಂಜೂರು ಮಾಡಿ ಸಾಲವನ್ನು ಸ್ವ-ಸಹಾಯ ಗುಂಪುಗಳಿಗೆ ನೀಡುವುದು. ಬ್ಯಾಂಕಿನಲ್ಲಿ ಒಂದು ಖಾತೆಯನ್ನು ತೆರೆದು ಸದರಿ ಉದ್ದೇಶಕ್ಕಾಗಿ ನೀಡಿದ ಅಕೌಂಟ್ ಪೇಯಿ ಚೆಕ್ಕುಗಳನ್ನು ಬ್ಯಾಂಕು ಖಾತೆಗೆ ಜಮಾ ಮಾಡಬಹುದಾಗಿದೆ. ಸ್ವ-ಸಹಾಯ ಸಂಘಗಳು ಸಾಲವನ್ನು ಫಲಾನುಭವಿಗೆ ಶೇ.5ರ ಬಡ್ಡಿ ದರದಲ್ಲಿ ನೀಡಬೇಕು.

3) ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು

4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು

5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು

6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು

7) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬೆಂಗಳೂರು

8) ವ್ಯವಸ್ಥಾಪಕ ನಿರ್ದೇಶಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

9) ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು

10) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

11) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

12) ಸಚಿವ ಸಂಪುಟ ಶಾಖೆ (ಪ್ರಕರಣ ಸಂ: ಸಿ.59/2007), 3ನೇ ಮಹಡಿ, ವಿಧಾನಸೌಧ, ಬೆಂಗಳೂರು

13) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3 & 9), 2ನೇ ಮಹಡಿ, ವಿಧಾನಸೌಧ, ಬೆಂಗಳೂರು

14) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು

15) ಸರ್ಕಾರದ ಉಪ ಕಾರ್ಯದರ್ಶಿಗಳು-2 ರವರ ಆಪ್ತ ಸಹಾಯಕರು, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು

16) ಸರ್ಕಾರದ ಉಪ ಕಾರ್ಯದರ್ಶಿಗಳು-3 ರವರ ಆಪ್ತ ಸಹಾಯಕರು, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು

17) ವಾರದ ರಾಜ್ಯ ಪತ್ರ

18) ಬಿಡಿ ಪ್ರತಿ

ii) ಸ್ವ-ಸಹಾಯ ಸಂಘಗಳು ಸಾಲದ ಮೊತ್ತವನ್ನು ವಾರ್ಷಿಕ ಶೇ.4 ರ ಬಡ್ಡಿಯೊಂದಿಗೆ ನಿಗಮಕ್ಕೆ ಹಿಂದಿರುಗಿಸಬೇಕಾಗುತ್ತದೆ. ಶೇ.01 ಭಾಗ ಬಡ್ಡಿಯನ್ನು ಸ್ವ-ಸಹಾಯ ಸಂಘಗಳು ಮತ್ತು ಸರ್ಕಾರೇತರ ಸಂಸ್ಥೆಗಳು ಸೇವಾ ಶುಲ್ಕವಾಗಿ ಇಟ್ಟುಕೊಂಡು ಸಂಘಗಳ ಕಾರ್ಯಚಟುವಟಿಕೆಗಳಿಗೆ ಬಳಸಿಕೊಳ್ಳಬಹುದು. ಪ್ರತಿ ಸ್ವ-ಸಹಾಯ ಸಂಘಕ್ಕೆ ನೀಡುವ ಹಣಕಾಸಿನ ನೆರವು ರೂ.2.50 ಲಕ್ಷಕ್ಕೆ ಮೀರಿರಬಾರದು.

iii) ಸ್ವ-ಸಹಾಯ ಗುಂಪುಗಳು ಸಾಲದ ಮೊತ್ತವನ್ನು 36 ತಿಂಗಳಲ್ಲಿ ತ್ರೈಮಾಸಿಕ ಕಂತುಗಳಲ್ಲಿ ಪ್ರತಿ ವರ್ಷ (30th June, 30th Sep, 31st Dec ಹಾಗೂ 31st March ರಲ್ಲಿ) ಸಾಲ ಮರುಪಾವತಿ ಮಾಡಬೇಕು. ನಿಗಮಗಳಿಗೆ ಸಾಲ ಮರುಪಾವತಿ ಮಾಡಲು ಸಾಲ ಮರುಪಾವತಿಗೆ 6 ದಿನಗಳ ರಿಯಾಯಿತಿ ಅವಧಿಯನ್ನು ನೀಡಿ ನಂತರ ಸಾಲ ಮರುಪಾವತಿ ಮಾಡಲು ಸುಸ್ತಿದಾರರಾಗಿದ್ದಲ್ಲಿ ಅಂತಹ ಸಂಸ್ಥೆಗಳು ಶೇ.5 ರಷ್ಟು ದಂಡದಂತೆ ಬಡ್ಡಿ ಹಾಕಬೇಕಾಗುತ್ತದೆ.

iv) ನಿಗಮವು ಸಂಸ್ಥೆಗಳಿಗೆ ಸಾಲ ಮಂಜೂರು ಮಾಡುವ ಬಗ್ಗೆ ಹಾಗೂ ಲೆಕ್ಕ ನಿರ್ವಹಣೆ ಬಗ್ಗೆ ಷರತ್ತು ಮತ್ತು ನಿಬಂಧನೆಗಳ ಬಗ್ಗೆ ಸರ್ಕಾರದ ಪೂರ್ವಾನುಮೋದನೆಯೊಡನೆ ಮಾರ್ಗಸೂಚಿಯನ್ನು ನೀಡಲು ಮುಕ್ತವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಕೆ.ಎಸ್.ವೇಣುಗೋಪಾಲ್)
ಸರ್ಕಾರದ ಉಪ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

ಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ರವರಿಗೆ ಈ ಆದೇಶವನ್ನು ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲು ಮತ್ತು ಪ್ರಕಟಿತ 200 ಪ್ರತಿಗಳನ್ನು ಕಳುಹಿಸಲು ಕೋರಿ ಕಳುಹಿಸಿದೆ.

ಪ್ರತಿಯನ್ನು:-

1) ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
2) ಉಪ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು

# ಸ್ವಸಹಾಯ ಸಂಘಗಳ ಬಗ್ಗೆ ಮಾರ್ಗಸೂಚಿ

## ಸ್ವಸಹಾಯ ಸಂಘಗಳನ್ನು ರಚಿಸಲು ಯಾರು ಸಹಾಯ ಮಾಡುವರು?

ಬಡಜನರು ಸಂಘಗಳನ್ನು ರಚಿಸಲು ಪ್ರಾರಂಭದಲ್ಲಿ ತಕ್ಕ ಮಟ್ಟಿಗೆ ವಿದ್ಯಾಭ್ಯಾಸ ಹೊಂದಿದ, ಸಹಾಯ ಮಾಡುವ ಮನಸ್ಸುಳ್ಳ ಸ್ಥಳೀಯ ವ್ಯಕ್ತಿಯ ಅವಶ್ಯಕತೆಯಿರುತ್ತದೆ. ಅಂಥಹ ವ್ಯಕ್ತಿಯು ಸಣ್ಣ ಉಳಿತಾಯದ ಉಪಯೋಗ ಹಾಗೂ ಸಂಘ ರಚನೆಯಿಂದಾಗುವ ಅನುಕೂಲತೆಯನ್ನು ಜನರಿಗೆ ತಿಳಿಸಿಕೊಡುತ್ತಾನೆ(ಳೆ). ಆ ವ್ಯಕ್ತಿಯನ್ನು ಕಾರ್ಯಕರ್ತ ಅಥವಾ ಪ್ರೇರಕರು ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಈ ಕಾರ್ಯಕರ್ತರು ಪರಿಚಯದವರೇ ಆಗಿರುತ್ತಾರೆ.

## ಸ್ವ ಸಹಾಯ ಸಂಘಗಳ ಕಾರ್ಯ ವೈಖರಿ

### 1. ಸಂಘದ ಗಾತ್ರ

- 10 ರಿಂದ 20 ಸದಸ್ಯರುಗಳ್ಳ ಸಂಘ ಅತ್ಯುತ್ತಮ (ಹೆಚ್ಚಿನ ಸದಸ್ಯತ್ವ ಸಕ್ರಿಯ ಭಾಗವಹಿಸುವಿಕೆಗೆ ಅಡಿಯಾದೀತು ಹಾಗೂ ಕಾನೂನಿನ್ವಯ ಅನೌಪಚಾರಿಕ ಸಂಘಗಳ ಸದಸ್ಯತ್ವ 20ನ್ನು ಮೀರಬಾರದು
- ಸಂಘದ ನೋಂದಣಿಯ ಅವಶ್ಯಕತೆಯಿಲ್ಲ

### ಸದಸ್ಯತ್ವ:

- ಒಂದು ಕುಟುಂಬ-ಒಬ್ಬ ಸದಸ್ಯ-ಒಂದು ಸಂಘ (ಇದರಿಂದ ಹೆಚ್ಚು ಕುಟುಂಬಗಳು ಸಂಘಕ್ಕೆ ಸೇರಿದಂತಾಗುತ್ತಾರೆ)
- ಸಂಪೂರ್ಣ ಪುರುಷರದೇ ಅಥವಾ ಸಂಪೂರ್ಣ ಮಹಿಳೆಯರದೇ ಸಂಘಗಳು ಸಾಮಾನ್ಯ. ಮಿಶ್ರ ಸಂಘಗಳಿಗೆ ಬೇಡಿಕೆ ಕಡಿಮೆ
- ಮಹಿಳೆಯರ ಸಂಘಗಳ ಕಾರ್ಯಕ್ಷಮತೆ ಹೆಚ್ಚು
  (ಉಳಿತಾಯ/ಸಾಲದ ಸದ್ಬಳಕೆಯಲ್ಲಿ ಹೆಚ್ಚು ಪರಿಣಾಮಕಾರಿ)
- ಸದಸ್ಯರ ಸಾಮಾಜಿಕ / ಆರ್ಥಿಕ ಹಿನ್ನೆಲೆ ಒಂದೇ ತರಹದ್ದಿರಬೇಕು
  (ಕಾರಣ:- ಮುಕ್ತ ವಿಚಾರ ವಿನಿಮಯಕ್ಕೆ ಹೆಚ್ಚು ಅವಕಾಶ. ಬಡವ ಶ್ರೀಮಂತರ ಮಿಶ್ರ ಗುಂಪಿನಲ್ಲಿ ಬಡವರಿಗೆ ತಮ್ಮ ವಿಚಾರಗಳನ್ನು ಮಂಡಿಸಲು ಅವಕಾಶವೇ ಸಿಗದಿರಬಹುದು)

### ಸಂಘದ ಸದಸ್ಯತ್ವದಲ್ಲಿ ಗಮನಿಸಬೇಕಾದ ಕೆಲವು ಸಾಮಾನ್ಯ ಅಂಶಗಳು

- ಕಡು ಬಡ ಕುಟುಂಬಗಳ ಸ್ತ್ರೀ / ಪುರುಷರು
- ದೈನಂದಿನ ಅಗತ್ಯತೆಗಳಿಗೂ ಲೇವಾದೇವಿಯವರನ್ನು ಅವಲಂಬಿಸುವವರು
- ರೂ.250ಕ್ಕೆ ಮೀರದ ಮಾಸಿಕ ಆದಾಯವಿರುವವರು
- 2.5 ಎಕರೆ ಮೀರದ ಖುಷ್ಕಿ ಜಮೀನು ಹೊಂದಿರುವವರು

ಸದಸ್ಯರ ಸಾಮಾನ್ಯ ಜೀವನ ಸ್ಥಿತಿ ಗತಿ

1. ಕಚ್ಚಾ ಮನೆಗಳಲ್ಲಿ ವಾಸ
2. ಕುಟುಂಬದಲ್ಲಿ ದುಡಿಯುವ ಕೈ ಒಂದೇ ಒಂದು ಅಥವಾ ಒಂದೂ ಇಲ್ಲ
3. ಕುಟುಂಬದಲ್ಲಿ ಅವಿದ್ಯಾವಂತ ವಯಸ್ಕರು
4. ದಿನಕ್ಕೆ ಎರಡು ಊಟ ಅಥವಾ ಊಟಕ್ಕೆ ಅನಾನುಕೂಲತೆ

ಸಭೆಗಳು

- ನಿಗದಿತ ರೀತಿಯಲ್ಲಿ ಸಭೆಗಳು ಕಡ್ಡಾಯ. ವಾರಕ್ಕೊಮ್ಮೆ ಅತ್ಯುತ್ತಮ: ಕನಿಷ್ಟ ತಿಂಗಳಿಗೊಂದಾದರೂ ಬೇಕೇ ಬೇಕು. (ಪರಸ್ಪರ ಹತ್ತಿರವಾಗಲು ಪರಸ್ಪರರ ಸಮಸ್ಯೆಗಳನ್ನು ತಿಳಿದುಕೊಳ್ಳಲು ಇದು ಸಹಕಾರಿ)

- ಕಡ್ಡಾಯ ಹಾಜರಾತಿ: ಎಲ್ಲ ಸಭೆಗೆ ಎಲ್ಲ ಸದಸ್ಯರು ಹಾಜರಾಗುವುದರಿಂದ ಸಂಘದ ಸ್ಥಿರತೆಗೆ ಸಹಾಯವಾಗುವುದಲ್ಲದೆ ಎಲ್ಲ ಸದಸ್ಯರಿಗೂ ತೃಪ್ತಿಯಾಗುವ ರೀತಿಯಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತದೆ.

- ಸದಸ್ಯತ್ವ ಪುಸ್ತಕ ನಡವಳಿಕೆ ಪುಸ್ತಕ, ಮುಂತಾದುವನ್ನು ನಿಗದಿತ ರೀತಿಯಲ್ಲಿ ಚಾಕಿಯಿರುವಂತೆ ಬರೆದಿಡಬೇಕು (ಇದರಿಂದ ಗುಂಪಿನ ಬಗ್ಗೆ ತಿಳಿದುಕೊಳ್ಳಲು ಬ್ಯಾಂಕಿಗೆ ಸಹಾಯ: ಸದಸ್ಯರಲ್ಲಿ ಪರಸ್ಪರ ನಂಬಿಕೆ ಮೂಡಲು ಸಹಕಾರಿ)

ಸಂಘದ ಲೆಕ್ಕ ಪತ್ರಗಳು:

- ಎಲ್ಲಾ ವ್ಯವಹಾರಗಳ ಬಗ್ಗೆ ಸರಳ ಹಾಗೂ ಸ್ಪಷ್ಟ ಪುಸ್ತಕಗಳ ನಿರ್ವಹಣೆ
- ಸದಸ್ಯರಲ್ಲಿ ಯಾರಿಗೂ ಪುಸ್ತಕಗಳ ಬರವಣಿಗೆ ಬರದಿದ್ದ ಪಕ್ಷದಲ್ಲಿ ಹೊರಗಿನ ಸಹಾಯಕ್ಕೆ ಅವಕಾಶ. (ತಕ್ಕ ಮಟ್ಟಿಗೆ ವಿದ್ಯೆಯುಳ್ಳ ಹಳ್ಳಿಯ ಹುಡುಗ / ಹುಡುಗಿಯರು ಈ ಕೆಲಸ ಮಾಡಲು ಉತ್ಸಾಹ ತೋರುವುದು ಗಮನಕ್ಕೆ ಬಂದಿದೆ; ಕೆಲವು ತಿಂಗಳ ನಂತರ ಈ ಕೆಲಸಕ್ಕೆ ಸಣ್ಣ ಸಂಭಾವನೆಯನ್ನು ಕೊಡುವ ವಿಚಾರವನ್ನು ಸಂಘವು ಯೋಜಿಸಬಹುದು.) ಕಾರ್ಯಕರ್ತರೂ ಇದಕ್ಕೆ ಸಹಾಯ ಮಾಡಬಹುದು.
- ಈ ಎಲ್ಲಾ ಪುಸ್ತಕಗಳ ಬರವಣಿಯು ಸಭೆ ನಡೆಯುವ ಸಮಯದಲ್ಲಿಯೇ ಮುಗಿಯಬೇಕು (ಇದರಿಂದ ಓದುಬರಹ ಬಾರದ ಸದಸ್ಯರಲ್ಲಿ ನಂಬಿಕೆ ಬೆಳೆಯುವುದು)

2. ಸಂಘವು ಇಡಬೇಕಾದ ಪುಸ್ತಕಗಳು ಯಾವುವು?

ಅ) ನಡವಳಿಕೆಗಳ ಪುಸ್ತಕ: ಸಂಘದ ನಿಯಮಾವಳಿಗಳು, ಸದಸ್ಯರ ಪಟ್ಟಿ, ಸಭೆಯ ನಡವಳಿಕೆಗಳು ಈ ಪುಸ್ತಕದಲ್ಲಿ ಬರೆಯಲ್ಪಡುತ್ತವೆ.

ಆ) ಉಳಿತಾಯ / ಸಾಲದ ಪುಸ್ತಕ: ಸದಸ್ಯರ ವೈಯಕ್ತಿಕ ಹಾಗೂ ಸಂಘದ ಒಟ್ಟು ಉಳಿತಾಯದ ವಿವರಗಳು: ವೈಯಕ್ತಿಕ ಸಾಲಗಳು, ಮರುಪಾವತಿ, ಬಡ್ಡಿ ಸಂಗ್ರಹಣೆ, ಬಾಕಿ ಇರುವ ಸಾಲ, ಮುಂತಾದವು ಈ ಪುಸ್ತಕದಲ್ಲಿ ಬರೆಯಲ್ಪಡುತ್ತವೆ

**ಇ) ವಾರದ / ಪಾಕ್ಷಿಕದ / ತಿಂಗಳ ರಿಜಿಸ್ಟರ್**

- ಪ್ರತಿ ಸಭೆಯ ಒಟ್ಟು ಹಣ ಸಂಗ್ರಹಣೆ / ವಿತರಣೆಯ ವಿವರಗಳು
- ಪ್ರತಿ ಸಭೆಯಲ್ಲೂ ಪೂರ್ಣಗೊಳಿಸಬೇಕು

ಈ) **ಸದಸ್ಯರ ವೈಯಕ್ತಿಕ ಪಾಸ್ ಪುಸ್ತಕಗಳು:** ಪ್ರತಿ ಸದಸ್ಯರ ಉಳಿತಾಯ / ಸಾಲದ ವಿವರಗಳು ನಿಯಮಿತವಾಗಿ ಬರೆಯಲ್ಪಡುತ್ತವೆ (ನಿಗದಿತ ಉಳಿತಾಯಕ್ಕೆ ಇದು ಪ್ರೋತ್ಸಾಹ ಕೊಡುತ್ತದೆ.)

**3. ಸಂಘದ ಮುಖ್ಯ ಚಟುವಟಿಕೆಗಳು**

ಅ) **ಉಳಿತಾಯ:** ಉಳಿತಾಯದ ಹಣ ಸಣ್ಣ ಮೊತ್ತದ್ದಿರಬಹುದು; ಆದರೆ, ಉಳಿತಾಯವು ನಿಯಮಿತವಾಗಿ ನಿರಂತರವಾಗಿ ಎಲ್ಲಾ ಸದಸ್ಯರಿಂದ ಆಗಲೇಬೇಕು.

**ಅ) ಆಂತರಿಕ ಸಾಲಗಳು**

- ಸಂಘವು ತನ್ನ ಉಳಿತಾಯವನ್ನು ಸದಸ್ಯರಿಗೆ ಸಾಲ ಕೊಡಲು ಬಳಸಬೇಕು
- ಸಾಲದ ಉದ್ದೇಶ, ಮೊತ್ತ, ಬಡ್ಡಿದರ, ಮರುಪಾವತಿ ಅವಧಿ, ಎಲ್ಲವನ್ನೂ ಸಂಘವೇ ತೀರ್ಮಾನಿಸಬೇಕು
- ಸಂಘದಲ್ಲಿ ಸರಿಯಾದ ಲೆಕ್ಕ ಪುಸ್ತಕಗಳನ್ನಿಡಬೇಕು

**ಸಂಘವು ಸಾಲ ಪಡೆದು ಸದಸ್ಯರಿಗೆ ಸಾಲ ಕೊಡುತ್ತದೆ.**

ಉಳಿತಾಯ ಖಾತೆ ತೆರೆಯಲು ಅನುಸರಿಸಬೇಕಾದ ನೀತಿ

ಆಡಳಿತ ಧೋರಣೆ: ಸ್ವ ಸಹಾಯ ಸಂಘಗಳ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆಯಲು ಅನುಮತಿಯನ್ನು ನೀಡಿ ರಿಜರ್ವ್ ಬ್ಯಾಂಕ್ ಆದೇಶ ಹೊರಡಿಸಿದೆ.

**ಸಂಘದ ನಡವಳಿಕೆ:**
ನಿರ್ಧಾರಿತ ಶಾಖೆಯಲ್ಲಿ ಖಾತೆ ತೆರೆಯಲು ಸರ್ವ ಸದಸ್ಯರು ಸಹಿ ಮಾಡಿದ ನಡವಳಿಕೆ (ಈ ಖಾತೆಯಲ್ಲಿ ವ್ಯವಹರಿಸಲು ಕನಿಷ್ಟ ಮೂರು ಸದಸ್ಯರನ್ನು ಗುರುತಿಸಿ, ಅವರಲ್ಲಿ ಯಾರಾದರೂ ಇಬ್ಬರು ವ್ಯವಹಾರಗಳನ್ನು ನಡೆಸಬಹುದೆಂದು ತೆಗೆದುಕೊಂಡ ತೀರ್ಮಾನದ ನಕಲು)

**ಸ್ವ ಸಹಾಯ ಸಂಘದಿಂದ ಆದೇಶ:**
ಸಂಘವು ಖಾತೆಯನ್ನು ಜಂಟಿಯಾಗಿ ವ್ಯವಹರಿಸಲು ಕನಿಷ್ಠ ಮೂರು ಸದಸ್ಯರನ್ನು ಆಯ್ಕೆ ಮಾಡುವುದು. ಭರ್ತಿ ಮಾಡಿದ ಅರ್ಜಿಯೊಂದಿಗೆ ನಡವಳಿಕೆಗೆ ನಕಲನ್ನು ಲಗತ್ತಿಸಿ ರಚನೆ ಮಾಡಿದ ಸ್ವಯಂ ಸೇವಾ ಸಂಸ್ಥೆಯ ಪರಿಚಯದೊಂದಿಗೆ ಬ್ಯಾಂಕ್ ಶಾಖೆಗೆ ಸಲ್ಲಿಸುವುದು.

**ಸಂಘದ ನಿಯಮಾವಳಿಯ ನಕಲು**
ಇದು ಕಡ್ಡಾಯವಲ್ಲ; ಸಂಘವು ಇಂತಹ ನಿಯಮಾವಳಿಗಳನ್ನು ರಚಿಸದಿದ್ದಲ್ಲಿ ಸಾಲ ಮಂಜೂರಾತಿಗೆ ಅಡ್ಡಿಯಾಗುವುದಿಲ್ಲ.

ಖಾತೆಯನ್ನು ಸಂಘದ ಹೆಸರಿನಲ್ಲಿಯೇ ತೆರೆದು ಪಾಸ್ ಪುಸ್ತಕವನ್ನು ನೀಡಬೇಕು.

## ಸಂಘದ ಅಂತರಿಕ ಸಾಲದ ನಿರ್ವಹಣೆ:

2-3 ತಿಂಗಳ ನಿರಂತರ ಉಳಿತಾಯದ ನಂತರ, ಸದಸ್ಯರಿಗೆ ಸಾಲ ನೀಡಲು ಪ್ರಾರಂಭಿಸಬೇಕು

ಸದಸ್ಯರಿಗೆ ಸಾಲದ ಉದ್ದೇಶ ಬಡ್ಡಿದರ, ಮುಂತಾದ ಷರತ್ತುಗಳನ್ನು ವಾರದ ಪ್ರಾರಂಭದಲ್ಲಿಯೇ ಚರ್ಚಿಸಿ ನಿರ್ಧರಿಸುತ್ತದೆ. (ರಿಜರ್ವ್ ಬ್ಯಾಂಕ್ ಹಾಗೂ ನಬಾರ್ಡ್ ಇದಕ್ಕೆ ಅನುಮತಿ ನೀಡಿದೆ) ವರ್ಷದ ಬಡ್ಡಗಿಂತ ತಿಂಗಳ ಬಡ್ಡಿ ಹಳ್ಳಿಗಳಲ್ಲಿ ಹೆಚ್ಚು ಪ್ರಚಲಿತವಾಗಿದೆ. ಅದು ತಿಂಗಳಿಗೆ ನೂರು ರೂ.ಗಳಿಗೆ 2-3 ರೂ.ಗಳ ಬಡ್ಡಿದರದಲ್ಲಿ ಇದೆ.

ಉಳಿತಾಯ ಮತ್ತು ಸಾಲಗಳ ಸರಳ ಹಾಗೂ ಸ್ಪಷ್ಟ ಲೆಕ್ಕಗಳನ್ನು ಬರೆಯತಕ್ಕದ್ದು (ಲೆಕ್ಕ ಪುಸ್ತಕಗಳ ಮಾದರಿ ಲಗತ್ತಿಸಲಾಗಿದೆ)

## ಸ್ವ ಸಹಾಯ ಸಂಘಕ್ಕೆ ಸಾಲ ಸೌಲಭ್ಯ:

ಸಾಲವನ್ನು ಯಾವಾಗಲೂ ಸಂಘದ ಹೆಸರಿನಲ್ಲಿ ಮಾತ್ರ ನೀಡಬೇಕು, ಸದಸ್ಯರ ವೈಯಕ್ತಿಕ ಹೆಸರಿಗಲ್ಲ

ಸದಸ್ಯರ ಅವಶ್ಯಕತೆಗೆ ತಕ್ಕಂತೆ, ಬಳಕೆಯೂ ಸೇರಿದಂತೆ ಯಾವುದೇ ಉದ್ದೇಶಕ್ಕೆ ಸಂಘದಿಂದ ಸಾಲ ನೀಡಬಹುದಾದ್ದರಿಂದ ಸಂಘಕ್ಕೆ ನೀಡುವ ಸಾಲಕ್ಕೆ ಯಾವುದೇ ನಿರ್ದಿಷ್ಟ ಉದ್ದೇಶವನ್ನು ಹೆಸರಿಸಬೇಕಾಗುವುದಿಲ್ಲ.

ಸಾಲಕ್ಕೆ ಸಂಘವು ಸಾಂಘಿಕವಾಗಿ ಜವಾಬ್ದಾರಿ; ಹಾಗಾಗಿ ಮರುಪಾವತಿಯೂ ಸಂಘದಿಂದಲೇ ಹೊರತು ವೈಯಕ್ತಿಕ ಸದಸ್ಯರಿಂದಲ್ಲ.

## ಸಾಲಕ್ಕೆ ಪೂರ್ವಭಾವಿಯಾಗಿ ಸಲ್ಲಿಸಬೇಕಾದ ದಾಖಲಾತಿಗಳು:

- ಅ. ಎಲ್ಲ ಸದಸ್ಯರೂ ಸಹಿ ಮಾಡಿದ, ಆಂತರಿಕ ಒಪ್ಪಂದ ಪತ್ರ (ಸಂಘದ 03 ಪ್ರತಿನಿಧಿಗಳು ಬ್ಯಾಂಕ್ ಖಾತೆಯನ್ನು ನಿರ್ವಹಿಸಲು ಸದಸ್ಯರೆಲ್ಲರೂ ಒಪ್ಪಿಗೆ ಕೊಟ್ಟ ಒಪ್ಪಂದ ಪತ್ರ)
- ಆ. ಸಾಲ ಪಡೆಯಲು ಸ್ವ ಸಹಾಯ ಸಂಘ ಸಲ್ಲಿಸಬೇಕಾದ ಸಾಲದ ಅರ್ಜಿ (ಇದರಲ್ಲಿ ಸಾಲದ ಉದದೇಶದ ವಿವರಗಳು ಇರಬೇಕು)
- ಇ. ಸಂಘಕ್ಕೆ ಸಾಲ ನೀಡುವಾಗ ತೆಗೆದುಕೊಳ್ಳಬೇಕಾದ ಒಪ್ಪಂದ ಪತ್ರ (ಈ ಪತ್ರ ನಿಗಮ ಮತ್ತು ಸಂಘ ಪರಸ್ಪರ ಮಾಡಿಕೊಂಡ ನಿಬಂಧನೆಗಳನ್ನು ಒಳಗೊಂಡಿದ್ದು, ಸ್ಟಾಂಪ್ ಶುಲ್ಕದ ಸಹಿತ ದಾಖಲಾತಿ ಮಾಡಲಾಗುತ್ತದೆ.)

## ಸಾಲದ ವಿತರಣಾ ಕ್ರಮ ಹೇಗೆ?

ಸಾಲದ ಹಣವನ್ನು ಸಂಘದ ನಿಯೋಜಿತ ಪ್ರತಿನಿಧಿಗಳು ಬ್ಯಾಂಕಿನಿಂದ ಪಡೆದು ವೈಯಕ್ತಿಕ ಸಾಲದ ಮೊತ್ತವನ್ನು ಸಂಘದ ಸಭೆಯಲ್ಲಿ ಸದಸ್ಯರಿಗೆ ವಿತರಣೆ ಮಾಡುವರು.

## ಸ್ವ ಸಹಾಯ ಸಂಘದಿಂದ ಸಾಲದ ಮರುಪಾವತಿ:

ಮರುಪಾವತಿ ಅವಧಿ ಮತ್ತು ವಿಧಾನವು ಸಂಘದೊಡನೆ ಚರ್ಚಿಸಿ ಬ್ಯಾಂಕಿನಿಂದ ನಿರ್ಧರಿಸಲ್ಪಟ್ಟು ನಿರಂತರವಾಗಿ ಮರುಪಾವತಿ ಮಾಡಲಾಗುತ್ತದೆ.

## ಸುಸ್ತಿ ಸಾಲದ ಬಗ್ಗೆ ಏನು?

ಎಲ್ಲರೂ ಭಾಗವಹಿಸಿ ನಡೆಸುವಂತಹ ಸಂಘ ಸುಸ್ತಿ ಸಾಲವನ್ನು ಉತ್ತೇಜಿಸುವುದಿಲ್ಲ. ಎಲ್ಲ ಸದಸ್ಯರಿಗೂ ಹಣ ತಮಗಷ್ಟೇ ಅಲ್ಲದೆ ಇತರೆ ಸದಸ್ಯರಿಗೂ ಸೇರುತ್ತದೆ ಎಂಬ ಮನವರಿಕೆ ಮಾಡಲಾಗುತ್ತದೆ.

ಸಾಂಘಿಕವಾಗಿ ಸಾಲ ಮರುಪಾವತಿಯು ಎಲ್ಲಾ ಸದಸ್ಯರುಗಳ ಜವಾಬ್ದಾರಿ. ಬ್ಯಾಂಕುಗಳಿಂದ ನೀಡಿದ ವೈಯಕ್ತಿಕ ಸಾಲಗಳಿಗಿಂತ ಅತಿ ಹೆಚ್ಚಿನ ಮರುಪಾವತಿ ಮಟ್ಟ ಸಂಘಗಲ್ಲಿ ಇರುವುದು ಅನುಭವಸಿದ್ಧ.

ಸ್ವ ಸಹಾಯ ಸಂಘಗಳ ಕುರಿತ ಪರಿಕಲ್ಪನೆಯು ಅಲ್ಪಸಂಖ್ಯಾತರಲ್ಲಿ ಇನ್ನೂ ಪಕ್ವಗೊಳ್ಳಬೇಕಾಗಿದೆ. ಅಲ್ಪಸಂಖ್ಯಾತರಿಂದ ಸಂಘಟಿತವಾದ ಸ್ವ ಸಹಾಯ ಸಂಘಗಳು ಅತ್ಯಲ್ಪವಾಗಿವೆ. ಹೀಗಾಗಿ ಮೇಲೆ ಉಲ್ಲೇಖಿಸಿರುವ ಮಾರ್ಗಸೂಚಿಗಳಲ್ಲಿ ಯಾವುದೇ ಷರತ್ತನ್ನು ಸಡಿಲಗೊಳಿಸಿಕೊಳ್ಳಲು ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಲಾಗಿದೆ.